ನಾನು, ಕನಕದುರ್ಗೆ ಇಲ್ಲಿಗೆ ಬರುವ ಮೊದಲು, ಎರಡೆಕರೆ ವಿಸ್ತಾರದ ಜಮೀನನ್ನು ನಮಗೆ ಮಾರಿದವರು ಇಲ್ಲಿ ಅಡಿಕೆ ಬೆಳೆದುಕೊಂಡಿದ್ದರಂತೆ. ನಾವು ಕೊಳ್ಳುವ ಸುಮಾರಿಗೇ, ಮೊದಲಿದ್ದವರ ಅವಲಕ್ಷ್ಯದಿಂದಾಗಿ ತೋಟವು ತೋಟವೆನಿಸುವ ಹಾಗಿರಲಿಲ್ಲ. ಇನ್ನು, ನಾವಿಬ್ಬರೂ ಸಹ ಕೃಷಿ ಕುರಿತಾಗಿ ಹೆಚ್ಚೇನೂ ಆಸ್ಥೆ ತೋರದೆ ಸುತ್ತಲಿನ ಕಾಡು ಕಾಡಾಗಿ ಒಳನುಗ್ಗಲಿಕ್ಕೆ ಅನುವು ಮಾಡಿಕೊಟ್ಟು, ಗಿಡಮರ ತರಿದ ಅರೆಯೆಕರೆ ಪ್ರಸ್ಥತಲದಂತಹ ಜಾಗದಲ್ಲಿ ಪುಟ್ಟದಾಗೊಂದು ಗಾಜಿನ ಮನೆ ಕಟ್ಟಿಕೊಂಡು ಇದ್ದುಬಿಟ್ಟಿದ್ದೇವೆ. ಮೇಲೆ ವಿಶಾಲವಾದ ಹೆಂಚು ಹೊಚ್ಚಿದ ಸೂರು; ಸೂರಿನ ಹೊರ ಅಂಚಿನಿಂದ, ಸುತ್ತಲೂ ಎಂಟೆಂಟು ಅಡಿ ಒಳಕ್ಕೆ ಗಾಜಿನ ಪರದೆಯೆನ್ನುವ ಹಾಗೆ ಪಾರದರ್ಶಕ ಮರೆ. ಮನೆಯೊಳಗಿದ್ದು ಎಲ್ಲೇ ನೋಡಿದರೂ, ನೋಟ ಹರಿಯುವುದ್ದಕ್ಕೂ ಕಾಡು, ಕಣಿವೆ, ಗುಡ್ಡ, ಬೆಟ್ಟ, ಹಸಿರು, ನೀಲಿ, ಆಕಾಶ... ಅಷ್ಟೆ.

★★★

ಮಗ ಕೈತಪ್ಪಿದ ಮೇಲೆ, ನಮ್ಮಿಬ್ಬರ ಉಳಿದ ಬದುಕನ್ನು ನಿರುಮ್ಮಳವಾಗಿ ನೀಗಿಕೊಳ್ಳುವುದೆಂಬ ಉಮೇದಿನಲ್ಲಿ 'ಸೀತಾನದಿ'ಯನ್ನೇನೋ ಸೇರಿದ್ದಾಯಿತು. ಆದರೆ ಬದುಕು ಸುಮ್ಮನಿರಬೇಕಲ್ಲ? ಕಾಡಿಯೇ ತೀರಿತು. ತೀರಿತೆಲ್ಲಿ, ಇವೊತ್ತಿಗೂ ಕಾಡುತ್ತಲೇ ಇದೆ.

ಹತ್ತು ವರ್ಷಗಳ ಹಿಂದೆ, ಹೃಷಿ ನಮ್ಮೊಡನಿಲ್ಲವೆಂಬುದೊಂದನ್ನು ಬಿಟ್ಟರೆ ಎಲ್ಲವೂ ಸುಸೂತ್ರವೇ ಇದ್ದಿತು, ಅವನು ನಮ್ಮನ್ನು, ಅದರಲ್ಲೂ ನನ್ನೊಬ್ಬನನ್ನು ಹೊರತುಳಿಸಿದನೆನ್ನುವ ಕಾರಣಕ್ಕೆ, ಕನಕದುರ್ಗೆ, 'ನಿನಗೆ ನಿನ್ನಪ್ಪ ಬೇಡ ಅಂತನಿಸಿದರೆ, ನಿನಗಿಂತ ಮೊದಲು ದಕ್ಕಿಬಂದ ನನಗೆ ಅವನು ಬೇಕು ಕಣೋ... ಬಿಟ್ಟೇನಾದರೆ ನಿನ್ನನ್ನೇ ಬಿಟ್ಟೇನು!' ಅಂತಂದು, ನನ್ನ ನಿರ್ಧಾರವನ್ನು ಅನುಮೋದಿಸಿದಳು. ಸರಿ, 'ಸೀತಾನದಿ'ಯ ಕಡೆಗದ್ದೆಯಲ್ಲಿ ಎರಡೆಕರೆ ತೋಟ ಕೊಂಡುಕೊಂಡು, ಎಲ್ಲೆಲ್ಲಿಯೂ ಹಸಿರೊಳಗೊಳ್ಳುವ ಹಾಗೆ ಗಾಜಿನ ಮನೆ ಕಟ್ಟಿಕೊಂಡು, ಒತ್ತಾಯದ ನೆಮ್ಮದಿಯೊಳ ತಂದುಕೊಂಡು ಇರತೊಡಗಿದೆವು. ಇನ್ನು ಈ ನೆಮ್ಮದಿಯೆನ್ನುವುದೇನು ಮಂತ್ರಕ್ಕುದುರಬಲ್ಲ ಕಳಿತ ಮಾವೆ? ಬಳಿಕ ಆಗಿದ್ದೇ ಬೇರೆ. ಆರು ವರ್ಷಗಳ ಹಿಂದೊಮ್ಮೆ, ಕನಕದುರ್ಗೆ ಕೊಪ್ಪದ ಬಳಿಯ ಕೈಮರದಲ್ಲಿ ಬಸ್ಸಿನಿಂದಿಳಿಯುವಾಗ, ಆಯತಪ್ಪಿ ಬಿದ್ದು, ಹೊರಗೆ ಚೆನ್ನಿದ್ದರೂ ತಲೆಯೊಳಗಿನ ವಸ್ತುವೇ ಜಖಮ್ಮಾಗಿ, ಯಾವ ವೈದ್ಯಕೀಯ ಔಷಧೀಯಕ್ಕೂ ಒಳಮಿದುಳು ಮಣಿಯದೆ ಇಟ್ಟಂತೆಯೇ ಇರುವ, ಮಲಗಿದಲ್ಲಿಯೇ ಮಲಗಿರುವ ಬೊಂಬೆಯಾಗಿಬಿಟ್ಟಳು. ಇಪ್ಪತ್ತೆಂಟು ವರ್ಷಗಳ ಕಾಲ ನನ್ನ ಬದುಕಿನ ಅತ್ಯುತ್ಕಟ ಪ್ರೇಮಪರ್ವದ ಅಧಿನಾಯಿಕೆಯಂತಿದ್ದವಳು, ಇದ್ದಕ್ಕಿದ್ದಂತೆ ಸೂತ್ರ ಹರಿದು ಸುಸ್ತಾಗಿ ಉರುಟಿದ ಕಟಪುಥಲಿಯಾಗಿಬಿಟ್ಟಳು. ದೇವರೇ... ಅದೆಂತಹ ನಿದ್ರೆ! ಏನು ತಿವಿತಕ್ಕೂ ಎಚ್ಚರಗೊಳ್ಳದ ಮಹಾಸುಷುಪ್ತಿ ಅದು! ಸಾಫ್ಟ್‌ವೇರಿರದ ಕಂಪ್ಯೂಟರಿನ ಹಾಗೆ ಕಣ್ಣೆದುರೆ ಹಳತಾಗಿಬಿಟ್ಟಳು. ಮನಸ್ಸೆಂಬ ಮನಸ್ಸಿಲ್ಲದಿದ್ದರೇನು, ಕಡುಲೌಕಿಕ ದೇಹಾಚಾರಕ್ಕೇನು ಕುಂದೆ? ಇದ್ದಲ್ಲಿಯೇ ಮೈನರೆಯಿತಾಗಿ ಹಣ್ಣಾದಳು. ಶಿಥಿಲಗೊಂಡಳು. ಡ್ರಿಪ್ಪೂಡಿಕೊಂಡು, ಡಯಪರು ಕಟ್ಟಿಸಿಕೊಂಡು, ಇದ್ದಲ್ಲೇ ಸಕಲ ಶರೀರಾರ್ಥ ಸೇವೆಗೈಯಿಸಿಕೊಂಡು ಇರುವಂಥವಳಾದಳು. ಒಂದು ರೀತಿಯಲ್ಲಿ ಗರ್ಭಗುಡಿಯಲ್ಲಿರುವ ದೇವರು ಹಾಗೆ! ಕಲ್ಲುದೇವರನ್ನು ತಿದ್ದಿ ತೀಡಿ ಸಕಲಾಂಗ ಸೇವಿಸುತ್ತಾರಲ್ಲ, ಥೇಟು ಹಾಗೇ ಆಗಿಬಿಟ್ಟಳು!!

ಇನ್ನು ದೇಹವೆನ್ನುವುದು ದಿನದಿನಕ್ಕು ಸಾವಿನೆಡೆ ಸಾಗುವ ವೆಹಿಕಲ್ಲೇ ತಾನೆ? ಸಾವೆಂಬ